ನಂ. 14460.—ಜೆ. 848.—ಯಡೆಹಳ್ಳಿ ಮುನಸಿಫರಾದ ಮೆಸ್ಸರ್ ಮಿಯರ್ ಹಂಜಾಹುಸೇನ್ ಬಿ. ಎ. ಬಿ. ಎಲ್. ಯವರು, ಹಾಸನ ಮುನಸಿಫ್ ಕೋರ್ಟಿಗೆ ವರ್ಗ ಮಾಡಲ್ಪಟ್ಟಿರುತ್ತಾರೆ.

ದಿವಾನರವರ ಆಫಿಸಿನಲ್ಲಿ ಕೆಲಸ ನೋಡುತಲಿರುವ ಮುನಸಿಫ್ ಮೆಸ್ಸರ್ ಟಿ. ಇ. ಜಯರಾಮು ಅಯ್ಯರ್ ಬಿ. ಎ. ಬಿ. ಎಲ್. ಯವರು, ಯಡೆಹಳ್ಳಿ ಮುನಸಿಫರಾಗಿರತಕ್ಕದ್ದು. ದಿವಾನರವರ ಆಫಿಸಿನಲ್ಲಿ ಚಾರ್ಜನ್ನು ಪಪ್ಪಿಸಿದ ಕೂಡ್ಲೆ ಅವರಕೆಲಸದ ಚಾರ್ಜನ್ನು ವಹಿಸತಕ್ಕದ್ದು.

ಜುಡಿಷಲ್ ಪ್ರೊಬೇಷನರ್ ಮೆಸ್ಸರ್ ಎಸ್. ಟಿ. ಗೋಪಾಲಯ್ಯಂಗಾರ್, ಬಿ. ಎ. ಬಿ. ಎಲ್. ಯವರು, ಮೆಸ್ಸರ್ ಜಯರಾಮು ಅಯ್ಯರವರಿಗೆ ಚಾರ್ಜನ್ನು ವಹಿಸುವ ವರಿಗೆ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ, ತತ್ಕಾಲಕ್ಕೆ ಕಡೇ ತರಗತಿಯಲ್ಲಿ ಎಡೆಹಳ್ಳಿ ಮುನಸಿಫರಾಗಿ ಬದಲಿ ನೋಡತಕ್ಕದ್ದು.

---

ತಾರೀಖು 12ನೇ ಮಾರ್ಚ್ 1895.

ನಂ. 14458.—ಜೆ. 846.—ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡ್ 12 ಮತ್ತು 14ನೇ ಸೆಕ್ಷನ್‌ಗಳಿಂದ ಕೊಡಲ್ಪಟ್ಟಿರುವ ಅಧಿಕಾರಗಳಂ ಚಲಾಯಿಸುವದರ ಮೂಲಕ, ಮೈಸೂರ ಗವರ್ನಮೆಂಟಿನವರು, ಇದರಡಿ ತಿಳಿಸಲ್ಪಡುವ ಅಮಲ್ದಾರ್ರುಗಳಿಗೆ ಅವರವರ ಅಧಿಕಾರ ಸರಹದ್ದುಗಳಿಗೆ ಒಳಪಟ್ಟಿರುವ ರೆಯಿಲ್ ಮಾರ್ಗಗಳಲ್ಲಿ ನಡೆಸಲ್ಪಡುವ ತಕ್ಕೀರ್‌ಗಳನ್ನು, 1894ನೇ ಇಸವಿ IVನೇ ನಂಬರ ಮೈಸೂರ ರೆಯಿಲ್ವೆ ರೆಗ್ಯುಲೇಷನ್ ಅನುಸರಿಸಿ ವಿಚಾರಣೆ ಮಾಡುವದಕ್ಕೆ 2ನೇ ಕ್ಲಾಸ್ ಮಾಜಿಸ್ಟ್ರೇಟ್ ಅಧಿಕಾರಗಳಂ ಕೊಟ್ಟಿರುತ್ತಾರೆ :—

1. ಕಡೂರ ಅಮಲ್ದಾರ್ ವ ಮೂರನೇ ಕ್ಲಾಸ್ ಮಾಜಿಸ್ಟ್ರೇಟ್ ಮಹದೇವರಾಯರು.
2. ದಾವಣಗೆರೆ ಅಮಲ್ದಾರ್ ವ ಮೂರನೇ ಕ್ಲಾಸ್ ಮಾಜಿಸ್ಟ್ರೇಟ್ ಜಿ. ಶ್ರೀನಿವಾಸಯ್ಯಂಗಾರು.
3. ಅರಸೀಕೆರೆ ಅಮಲ್ದಾರ್ ವ ಮೂರನೇ ಕ್ಲಾಸ್ ಮಾಜಿಸ್ಟ್ರೇಟ್ ಎ. ವೀರರಾಘವಲು ನಾಯಡರು.
4. ಹೊಳಲ್ಕೆರೆ ಅಮಲ್ದಾರ್ ವ ಮೂರನೇ ಕ್ಲಾಸ್ ಮಾಜಿಸ್ಟ್ರೇಟ್ ಎಂ. ಕೃಷ್ಣರಾಯರು.

ಹುಕುಂ ಬವೋಜೀಬ್,

ಎಲ್. ಅನಂತಸಾಮಿರಾವ್,
ಫಾರ್ ಚೀಫ್ ಸೆಕ್ರಟರಿ.

---